**ಪತ್ರಿಕಾ ಪ್ರಕಟಣೆ**

# ಭಾರತದ ಸಮುದ್ರ ಆಹಾರ ಆಮದು ಗುರಿ 2020ರ ಹೊತ್ತಿಗೆ 10 ಬಿಲಿಯನ್ ಡಾಲರ್

- **ಅಲಂಕಾರಿಕ ಮೀನುಗಳ ವಹಿವಾಟಿನ ಸಾಧ್ಯತೆಗಳನ್ನು ಕಂಡುಕೊಳ್ಳಬೇಕು**
- **ಮಂಗಳೂರಿನಲ್ಲಿ 3 ದಿನಗಳ ಅಕ್ವಾ ಅಕ್ವೇರಿಯಾ ಇಂಡಿಯಾಗೆ ಚಾಲನೆ**

**ಮಂಗಳೂರು, ಮೇ 14:** ಭಾರತ ಅಲಂಕಾರಿಕ ಮೀನುಗಳ ಮಾರುಕಟ್ಟೆ ಸಾಧ್ಯತೆಯನ್ನು ಅರಿಯುವ ಮೂಲಕ ಸಾಗರದ ಆರ್ಥಿಕತೆಯನ್ನು ಇನ್ನು ಹೆಚ್ಚಿಸಿಕೊಳ್ಳಬೇಕಿದೆ. ಪ್ರಸ್ತುತ 18–20 ಬಿಲಿಯನ್ ಡಾಲರ್‌ಗಳಷ್ಟು ಅಗಾಧವಾದ ಉದ್ಯಮವಾಗಿ ಜಾಗತಿಕವಾಗಿ ಮಾರುಕಟ್ಟೆಯನ್ನು ಹೊಂದಿದೆ. ಈ ವಲಯದಲ್ಲಿ ಇನ್ನಷ್ಟು ಬೆಳೆಯುವುದಕ್ಕೆ ಸ್ಪರ್ಧಾತ್ಮಕತೆಯನ್ನು ಮೈಗೂಡಿಸಿಕೊಂಡಿದೆ ಎಂಬ ಅಭಿಪ್ರಾಯ ಇಂದು ಇಲ್ಲಿ ಆರಂಭವಾದ ಸಮಾವೇಶದಲ್ಲಿ ವ್ಯಕ್ತವಾಯಿತು.

ಜಲಕೃಷಿ 5 ಬಿಲಿಯನ್ ಡಾಲರ್‌ಗಳಿಗೂ ಅಧಿಕವಾದ ರಫ್ತು ಮೌಲ್ಯವನ್ನು ಹೊಂದಿದ್ದು, ಇದೇ ಭಾರತದ ಸಾಗರ ಉತ್ಪನ್ನಗಳ ಪೈಕಿ, ಅಲಂಕಾರಿಕ ಮೀನುಗಳು, ಅಗತ್ಯ ಪರಿಕರಗಳು ಮತ್ತು ಮೀನಿನ ಆಹಾರ ಹಾಗೂ ಇನ್ನಷ್ಟು ಅವಕಾಶಗಳನ್ನು ಹೊಂದಿರುವ ಈ ಕ್ಷೇತ್ರ ಅದ್ಭುತವಾದ ಆರ್ಥಿಕ ಅವಕಾಶಗಳನ್ನು ಒದಗಿಸುವುದು ಎಂದು ಮಂತ್ರಿಗಳು, ಆಡಳಿತಾಧಿಕಾರಿಗಳು ಮತ್ತು ತಜ್ಞರು ಅಕ್ವಾ ಅಕ್ವೇರಿಯಾ ಇಂಡಿಯಾದ 4ನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಅಭಿಪ್ರಾಯಪಟ್ಟರು.

ಮೇ 14ರಿಂದ 16ರವರೆಗೆ ನೆಹರು ಮೈದಾನದಲ್ಲಿ ಸಾಗರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಆಯೋಜಿಸಿದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಮೀನುಗಾರಿಕಾ ಸಚಿವ ಶ್ರೀ ಪ್ರಮೋದ್ ಮದ್ವರಾಜ್ ಅವರು ಜಲಕೃಷಿ 2009–10ರ ಸಾಲಿನಿಂದ ಮಹತ್ವದ ಪ್ರಗತಿಯನ್ನು ಕಾಣುತ್ತಿದ್ದು 2016–17ನೇ ಸಾಲಿನಲ್ಲಿ 5.6 ಬಿಲಿಯನ್ ಡಾಲರ್ ಮೌಲ್ಯದ ರಫ್ತವನ್ನು ಮಾಡುವ ಗುರಿ ಹೊಂದಿದೆ ಎಂದು ಹೇಳಿದರು.

" ಭಾರತ ಮಹತ್ವಾಕಾಂಕ್ಷೆಯಿಂದ 2020ರ ಹೊತ್ತಿಗೆ 10 ಬಿಲಿಯನ್ ಡಾಲರ್‌ಗಳನ್ನು ಸಾಗರ ಉತ್ಪನ್ನಗಳ ರಫ್ತಿನಿಂದ ಗಳಿಸುವ ಗುರಿಯನ್ನು ಹೊಂದಬಹುದು" ಎಂದೂ ಪ್ರಮೋದ್ ಮದ್ವರಾಜ್ ಅವರು ಹೇಳಿದರು.

ಜಿಐಎಸ್ ಅಪ್ಲಿಕೇಷನ್‌ಗಳು ಮತ್ತು ಮೊಬೈಲ್ ಆ್ಯಪ್‌ಗಳು ಜಲಕೃಷಿಯಲ್ಲಿ ಬಳಕೆ ಮಾಡಲಾಗುತ್ತಿದ್ದು ಉಪಗ್ರಹದ ಮೂಲಕ ಚಿತ್ರಗಳನ್ನು ಪಡೆಯುವ ಮೂಲಕ ಉತ್ತಮ ಜಲಕೃಷಿ

ಸಾಧ್ಯತೆಗಳನ್ನು ಕಂಡುಕೊಳ್ಳಲಾಗಿದೆ ಎಂದ ಅವರು, ಎಎಐ2017 ಜಲಕೃಷಿ ಸಮುದಾಯಕ್ಕೆ ಭವಿಷ್ಯದಲ್ಲಿ ಅನುಸರಿಸಬೇಕಾದ ಆದ್ಯತೆಯ ವಲಯಗಳನ್ನು ಮತ್ತು ಕೆಲಸಗಳನ್ನು ಕಂಡುಕೊಳ್ಳುವುದಕ್ಕೆ ನೆರವಾಗಲಿದೆ. ಸಂಸ್ಕರಿಸಲಾದ ಕಪ್ಪೆ ಚಿಪ್ಪುಗಳು ಭಾರತದಿಂದ ರಫ್ತಾಗುವ ಸಾಗರ ಆಹಾರದ ಪೈಕಿ ಶೇ. 70ರಷ್ಟು ಪಾಲನ್ನು ಹೊಂದಿದೆ. ಇದಕ್ಕೆ ಶೇ. 80ರಷ್ಟು ರಫ್ತು ಮೌಲ್ಯ ಮತ್ತು ಶೇ. 53ಕ್ಕೂ ಹೆಚ್ಚಿನ ಸಾಗರ ಆಹಾರ ರಫ್ತಿನ ಮೌಲ್ಯವನ್ನೂ ಪಡೆದುಕೊಂಡಿವೆ ಎಂದು ವಿವರಿಸಿದರು.

"ಭಾರತದ ಜಲಕೃಷಿ ವಲಯದಲ್ಲಿ ಇದೊಂದು ಮಹತ್ವದ ಸಾಧನೆ" ಎಂದು ಪ್ರಮೋದ್ ಮಧ್ವರಾಜ್ ಹೇಳಿದರು

ಸೀಗಡಿಯ ಸರಕು ಪೂರೈಸುವ ವಿದೇಶಿ ಪೂರೈಕೆದಾರರನ್ನು ಕಟ್ಟುನಿಟ್ಟಾದ ಆಯ್ಕೆ ಪ್ರಕ್ರಿಯೆ ಮೂಲಕ ಗುರುತಿಸಬೇಕು ಮತ್ತು ಆಮದು ಮಾಡಿಕೊಳ್ಳುವುದಕ್ಕೆ ಅನುಮತಿ ನೀಡಬೇಕು. ಇವರಿಗೆ ಮೀನು ಮರಿ ಮಾಡು ಕೇಂದ್ರಗಳು, ಆಮದು ಮಾಡಿಕೊಳ್ಳಲಾದ ಎಲ್ಲ ರೀತಿಯ ಸರಕನ್ನು ಕಡ್ಡಾಯವಾಗಿ ಶುದ್ಧೀಕರಿಸುವ ವ್ಯವಸ್ಥೆಯನ್ನು ಚೆನ್ನೈನ ಅಕ್ವಾಟಿಕ್ ಕ್ವಾರಂಟೀನ್ ಫೆಸಿಲಿಟಿ ಲಭ್ಯವಿದೆ. ಸೀಗಡಿಯ ಸಂಸ್ಕರಣಾ ಅಭಿವೃದ್ಧಿ ಸೌಲಭ್ಯವಿರುವುದರಿಂದ ಇದು ನಿರಂತರ ರೋಗಗಳ ಪರಿಶೀಲನೆ, ಫಾರ್ಮ್, ಮರಿ ಮಾಡುವ ಕೇಂದ್ರಗಳ ಪರಿಶೀಲನೆ ನಡೆಯುತ್ತದೆ.

ಶ್ರೀ ಮಧ್ವರಾಜ್ ಅವರು ಮುಂದುವರೆದು, ಇದೇ ಮೊದಲ ಬಾರಿಗೆ ಅಕ್ವಾ ಅಕ್ವೇರಿಯಾ ಇಂಡಿಯಾ ಪಶ್ಚಿಮ ಕರಾವಳಿ ಭಾಗದಲ್ಲಿ ನಡೆಯುತ್ತಿದೆ. ಭಾರತದ ಪಶ್ಚಿಮ ಕರಾವಳಿ, ಗುಜರಾತ್, ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕ ರಾಜ್ಯಗಳ ಉದ್ದಕ್ಕೂ ಹರಡಿಕೊಂಡಿದೆ. ಜಲಕೃಷಿಗೆ ಅಗಾಧವಾದ ಅವಕಾಶಗಳನ್ನು ಹೊಂದಿರುವ ಕರಾವಳಿ ಪ್ರದೇಶದಲ್ಲಿ ಜೀವವೈವಿಧ್ಯವನ್ನು ಕಾಪಾಡಿಕೊಂಡು ಈ ಮಹತ್ವದ ಅವಕಾಶವನ್ನು ಬಳಸಿಕೊಳ್ಳಬಹುದು" ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಸರ್ಕಾರ ಒಳನಾಡು ಜಲಕೃಷಿ ಮತ್ತು ಅಲಂಕಾರಿಕ ಮೀನು ಸಾಕಾಣಿಕೆ ಅಭಿವೃದ್ಧಿಗೆ ಹೊಸ ನೀತಿಯನ್ನು ರೂಪಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವುದಾಗಿ ಸಚಿವರು ಮಾಹಿತಿ ನಿಡಿದರು. " ರಾಜ್ಯ ಸರ್ಕಾರ, ಕರ್ನಾಟಕದ ಕರಾವಳಿಯಲ್ಲಿ ಕಪ್ಪೆಚಿಪ್ಪು, ಸೀಗಡಿ ಸಾಕಾಣಿಕೆಗೆ ಅಗತ್ಯವಿರುವ, ಸುಸ್ಥಿರ ಪ್ರಗತಿಗೆ ಬೇಕಾದ ಎಲ್ಲ ರೀತಿಯ ಸಹಕಾರವನ್ನು ನೀಡಲು ಸಿದ್ಧವಿದೆ, ಈ ನಿಟ್ಟಿನಲ್ಲಿ ಶೀಘ್ರಗತಿಯ ಯೋಜನೆಯೊಂದು ಸಿದ್ಧವಾಗುತ್ತಿದೆ" ಎಂದು ತಿಳಿಸಿದರು.

ಅತಿಥಿಗಳಾಗಿ ಮಾತನಾಡಿದ ಮಂಗಳೂರಿನ ಸಂಸದ ಶ್ರೀ ನಳಿನ್ ಕುಮಾರ್ ಕಟೀಲ್ ಅವರು, ಇದೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಹಾಗೂ ಪಶ್ಚಿಮ ಕರಾವಳಿಯಲ್ಲಿ ಅಕ್ವಾ ಅಕ್ವೇರಿಯಾ ಇಂಡಿಯಾ ಆಯೋಜಿಸಲಾಗಿದೆ. ಸಂತೋಷ ತಂದಿದೆ ಎಂದು ಹೇಳಿದರು.

" ಇನ್ನಷ್ಟು ಇಂಥ ಕಾರ್ಯಕ್ರಮಗಳು ಆಯೋಜನೆಯಾಗುವ ಮೂಲಕ ಜಲಕೃಷಿಯಲ್ಲಿ ತೊಡಗಿಕೊಂಡಿರುವ ಕೃಷಿಕರಿಗೆ, ಅಲಂಕಾರಿಕ ಮೀನು ಸಾಕಣೆ ಮಾಡುವವರಿಗೆ, ಸಾಮಾನ್ಯ ಜನರಿಗೆ ಹಾಗೂ ವಿದ್ಯಾರ್ಥಿಗಳು ಲಾಭ ಪಡೆದುಕೊಳ್ಳುವಂತಾಗಬೇಕು" ಎಂದು ಹೇಳಿದರು.

ಇನ್ನೊಬ್ಬ ಸಂಸದರಾದ ಡಾ ಕೆ ಹರಿಬಾಬು ಅವರು, ಜಲಕೃಷಿ ಕೇವಲ ಕರಾವಳಿ ಪ್ರದೇಶಗಳಿಗಷ್ಟೇ ಸೀಮಿತವಾಗಿಲ್ಲ. ಕರಾವಳಿ ಇಲ್ಲದ ಹರ್ಯಾಣ ರಾಜ್ಯದಲ್ಲೂ ದೊಡ್ಡ ಅಲೆ ಹುಟ್ಟು ಹಾಕಿದೆ ಎಂದು ಹೇಳಿದರು.

“ಸಾಗರ ಆಹಾರ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ ಕೃಷಿಕರು ಮತ್ತು ಉತ್ಪಾದಕರು ರೋಗನಿರೋಧಕಗಳನ್ನು ಬಳಸದೇ ಇರುವಂತೆ ಎಚ್ಚರವಹಿಸಬೇಕು. ಒಂದು ವೇಳೆ ಬಳಸಿದರೆ ಇದು ರಫ್ತಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದರು.

ಆರಂಭದಲ್ಲಿ ಮಾತನಾಡಿದ ಎಂಪಿಇಡಿಎ ಅದ್ಯಕ್ಷ ಡಾ ಎ ಜಯತಿಲಕ್ ಅಕ್ವಾ ಅಕ್ವೇರಿಯಾ ಇಂಡಿಯಾ ಜಲಕೃಷಿ ಮತ್ತು ಅಲಂಕಾರಿಕ ಮೀನುಗಳ ಸಾಕಾಣಿಕೆಯಲ್ಲಿ ಲಭ್ಯವಿರುವ ಹೊಸ ತಂತ್ರಜ್ಞಾನಗಳನ್ನು ಪರಿಚಿಯಿಸುವ ವೇದಿಕೆ ಎಂದರು.

“ಕಳೆದ ಕೆಲ ವರ್ಷಗಳಲ್ಲಿ ಸೀಗಡಿ ಉತ್ಪಾದನೆ 5 ಲಕ್ಷ ಟನ್ ಗಡಿ ದಾಟಿದ್ದು, ಕರಾವಳಿ ಪ್ರದೇಶದ ಜಲಕೃಷಿ ಉತ್ಪಾದನೆ ಮಹತ್ವದ ಪ್ರಗತಿ ಕಾಣುತ್ತಿದೆ. ಈ ಪ್ರಗತಿಯಲ್ಲಿ ಕೃಷಿಕರು, ಮರಿ ಮಾಡುವ ಕೇಂದ್ರಗಳ ನಿರ್ವಾಹಕರು, ಮೇವು ಉತ್ಪಾದಕರು, ಪೂರೈಕೆದಾರರು ಮತ್ತು ಸಂಸ್ಕರಣದಾರರು ಪಾಲುದಾರರು ಎಂದು ಹೇಳಿದರು.

ಮುಂದುವರೆದು ಮಾತನಾಡುತ್ತಾ, ಡಾ ಜಯತಿಲಕ್ ಅವರು, ಭಾರತದಲ್ಲಿ ಜಲಕೃಷಿ ವಲಯ ಚೆನ್ನೈನಲ್ಲಿರುವ ಅಕ್ವಾಟಿಕ್ ಕ್ವಾರಂಟೀನ್ ವ್ಯವಸ್ಥೆಯಿಂದಾಗಿ ದೋಷಗಳಿಲ್ಲದ ಮನ್ನಣೆ ಪಡೆಯಲು ಸಾಧ್ಯವಾಗಿದೆ. ಮರಿ ಮಾಡುವ ಕೇಂದ್ರಗಳಿಗೆ ಯಾವುದೇ ಸೋಂಕುಗಳಿಲ್ಲದ ಮೊಟ್ಟೆಗಳು ಲಭ್ಯವಾಗುವಂತೆ ನೋಡಿಕೊಳ್ಳುತ್ತಿದೆ ಎಂದು ಹೇಳಿದರು.

ಮಂಗಳೂರಿನ ಶಾಸಕ ಶ್ರೀ ಜೆ ಆರ್ ಲೊಬೊ ಮಾತನಾಡಿದರು. ಎಂಪಿಇಡಿಎನ ಕಾರ್ಯದರ್ಶಿ ಶ್ರೀ ಬಿ ಶ್ರೀ ಕುಮಾರ್‌ವಂದನೆಗಳು ಸಲ್ಲಿಸಿದರು.

ಮುಂದಿನ ಎರಡು ದಿನಗಳಲ್ಲಿ ಸಾಗರ ಆಹಾರ ಉದ್ಯಮದ ಎದುರಿರುವ ಸವಾಲುಗಳು ಮತ್ತು ಅವಕಾಶಗಳನ್ನು ಕುರಿತು ಮಹತ್ವದ ಚರ್ಚೆಗಳು ಜರುಗಲಿವೆ.

ಎಎಐ2017ಗೆ ಕೃಷಿಕರು, ಸಾಗರ ಜೀವಿಗಳ ಸಂತಾನಾಭಿವೃದ್ಧಿಯಲ್ಲಿ ತೊಡಗಿರುವವರು, ನಿರ್ವಾಹಕರು, ಮೇವು ತಯಾರಕರು, ಪೂರೈಕೆದಾರರು ಸೇರಿ, ತಂತ್ರಜ್ಞಾನಿಗಳು, ವಿಜ್ಞಾನಿಗಳು ಜಗತ್ತಿನ ವಿವಿಧೆಡೆಯಿಂದ ಆಗಮಿಸುವ ತಜ್ಞರು ಪಾಲ್ಗೊಳ್ಳುವರು.

ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸ್ಮರಣ ಸಂಚಿಕೆ, ಕ್ಯಾಟಲಾಗ್ ಅನ್ನು ಬಿಡುಗಡೆ ಮಾಡಲಾಯಿತು.